# ನೆಚ್ಚಿನ ನಾಯಕನೊಂದಿಗಿನ ನೆನಪಿನಲ್ಲಿ..

ರಾಜಕಾರಣಿಗಳಲ್ಲಿ ಕೆಲವರ ವ್ಯಕ್ತಿತ್ವ ಜನರಿಗೆ ಬಹಳ ಇಷ್ಟವಾಗುತ್ತದೆ. ಅವರಿಂದ ಕೈಕುಲುಕಿಸಿಕೊಂಡರೂ ಸಾಕು, ಎಲ್ಲಿಲ್ಲದ ರೋಮಾಂಚನವಾಗುತ್ತದೆ. ನನ್ನ ನೆಚ್ಚಿನ ನಾಯಕ ರಾಮಕೃಷ್ಣ ಹೆಗಡೆ ಅವರನ್ನು ಭೇಟಿಯಾಗಿ ಅವರೊಂದಿಗೆ ಫೋಟೊ ಕ್ಲಿಕ್ಕಿಸಿಕೊಂಡದ್ದು ಜೀವಮಾನದಲ್ಲಿ ಮರೆಯಲಾರದ ಸವಿನೆನಪಾಗಿ ಉಳಿದಿದೆ.

**■ ಸೂರ್ಯಕಾಂತ ಮಳಗೀಕರ್**

ಉದ್ಯಮದ ಕ್ಷೇತ್ರ ಯಾವುದೇ ಇರಲಿ, ಅಲ್ಲಿನ ಕೆಲ ನೆನಪುಗಳು ಸದಾ ನಿತ್ಯನೂತನ. ಕಾರ್ಖಾನೆ, ಕೈಗಾರಿಕೆ ಮುಂತಾದ ಕ್ಷೇತ್ರದಲ್ಲಿ ವೃತ್ತಿ ನಿರತನಾಗಿದ್ದಾಗ ಅನೇಕ ಘಟನೆಗಳು ನಡೆದುಹೋದವು. ವೃತ್ತಿ ಎಂದ ಮೇಲೆ ಹಲವು ಸಂದರ್ಭಗಳಲ್ಲಿ ಸೆಲೆಬ್ರಿಟಿಗಳನ್ನು, ರಾಜಕಾರಣಿಗಳನ್ನು ಸಿನಿಮಾ ಮಂದಿಯನ್ನು.. ಹೀಗೆ ಅನೇಕರನ್ನು ಭೇಟಿಯಾಗಲೇ ಬೇಕಾಗುತ್ತದೆ. ನನ್ನ ಜೀವನದಲ್ಲಿ ನಾನು ಅತ್ಯಂತ ಇಷ್ಟಪಡುತ್ತಿದ್ದ ರಾಮಕೃಷ್ಣ ಹೆಗಡೆ ಅವರನ್ನು ಭೇಟಿಯಾಗಿ ಅವರೊಂದಿಗೆ ಫೋಟೊ ತೆಗೆಸಿಕೊಳ್ಳುವ ಅವಕಾಶ ಸಿಕ್ಕಿದ್ದು ನನ್ನ ಸುದೈವ ಎಂದೇ ಹೇಳಬೇಕು.

80ರ ದಶಕ ಕರ್ನಾಟಕದ ಎಲ್ಲ ಉದ್ಯಮ ಕ್ಷೇತ್ರಗಳು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದವು. ಆರ್ಥಿಕ ಮುಗ್ಗಟ್ಟು, ಕಾರ್ಮಿಕ ಮುಷ್ಕರ. ವಿದ್ಯುತ್ ಅಭಾವ ಎಲ್ಲ ಸಮಸ್ಯೆಗಳಿಂದ ಹಲವು ಕಾರ್ಖಾನೆಗಳು ಮುಚ್ಚುವ ಸ್ಥಿತಿಯಲ್ಲಿದ್ದವು. ಅದರಲ್ಲೂ ಕರ್ನಾಟಕದಲ್ಲಿರುವ ಸುಮಾರು 18 ರಿಂದ 20 ಕೈಮಗ್ಗದ ಮಿಲ್‌ಗಳು ತುಂಬಾ ದುಸ್ಥಿತಿಯಲ್ಲಿದ್ದವು. ಸರ್ ಎಂ. ವಿಶ್ವೇಶ್ವರಯ್ಯನವರ ವೇದವಾಕ್ಯವಾಗಿದ್ದ ಆದ 'ಇಂಡಸ್ಟ್ರಿಯಲೈಸ್ ಆರ್ ಪೆರಿಶ್ (Indusrialise or Persih) ಅನ್ನು ಆಗಿನ ಉದ್ಯೋಗ ಪತಿಗಳು ದುಃಖದಿಂದ ಸರ್ಕಾರದ ಮುಂದೆ ತೋಡಿಕೊಂಡಿದ್ದರು. 1984 ರಿಂದ 1987ರ ಅವಧಿ ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಆಡಳಿತದಲ್ಲಿದ್ದರು.

ಸಾಮಾನ್ಯವಾಗಿ ರಾಜ್ಯ ಮುಂಗಡ ಪತ್ರ (ಬಜೆಟ್)ಗೆ ಮೊದಲು ಮುಖ್ಯಮಂತ್ರಿಗಳನ್ನು ಎಲ್ಲ ಉದ್ಯೋಗ ಕ್ಷೇತ್ರಗಳು ತಮ್ಮ ಸಂಘಟನೆಗಳ ಮೂಲಕ ಉದ್ಯೋಗಗಳಿಗೆ ಯಾವ ರೀತಿಯ ರಿಯಾಯಿತಿಯನ್ನು ನೀಡಬೇಕೆಂಬ ಮನವಿ ಪತ್ರವನ್ನು ನೀಡಿ ಅವರನ್ನು ಮುಖತಃ ಭೇಟಿಯಾಗಿ ಅಹವಾಲು ಸಲ್ಲಿಸುವುದು ರೂಢಿ. ನಾನು ಆ ಸಮಯದಲ್ಲಿ ಕರ್ನಾಟಕ ಟೆಕ್ಸ್‌ಟೇಲ್ ಮಿಲ್ಸ್ ಅಸೋಸಿಯೇಷನ್‌ನ ಸೆಕ್ರೆಟರಿಯಾಗಿದ್ದೆ. ನಮ್ಮ ಅಸೋಸಿಯೇಷನ್‌ನ ಅಧ್ಯಕ್ಷರಾಗಿ ಯಾದಾಳಂ ಎನ್. ಗಂಗಾಧರ ಶೆಟ್ಟಿ ಅವರು (ರಾಮಕೃಷ್ಣ ಮಿಲ್‌ನ ಚೇರ್ಮನ್) ನಿರ್ವಹಿಸುತ್ತಿದ್ದರು. ಇದೇ ಸಮಯದಲ್ಲಿ ಎಲ್ಲ ಕೈಗಾರಿಕೆಗಳ ಪ್ರತಿನಿಧಿಗಳು ಮುಖ್ಯಮಂತ್ರಿಗಳ ಸಂದರ್ಶನಕ್ಕೆ ಕಾಯುತ್ತಿದ್ದೆವು. ಯಾವಾಗ ಕರೆಯುತ್ತಾರೆ ಎಂಬುದು ಕೌತುಕದ ವಿಚಾರವಾಗಿತ್ತು.

ಅದರಲ್ಲೂ ಅವರ ಖಾಸಗಿ ಕಾರ್ಯದರ್ಶಿ (ಪಿಎಸ್) ಆಗಿದ್ದ ರಾಮಪ್ಪನವರು ಒಂದು ಅಭೇದ್ಯ ಕೋಟೆ. ಹೀಗಿರುವಾಗ ಒಂದು ದಿನ ಮುಖ್ಯಮಂತ್ರಿ ತಮ್ಮ ಅಧಿಕೃತ ನಿವಾಸ 'ಕೃಷ್ಣಾ'ದಲ್ಲಿ ಎಲ್ಲ ಸಂಘಟನೆಗಳ ಉದ್ಯೋಗಪತಿಗಳನ್ನು ಮೀಟಿಂಗ್‌ಗೆ ಕರೆದರು. ಟೆಕ್ಸ್‌ಟೈಲ್ಸ್ ಮಿಲ್ ಅಸೋಸಿಯೇಷನ್ ನವರಾದ ನಾವೆಲ್ಲರೂ ಅದರಲ್ಲಿ ಭಾಗವಹಿಸಲು ಹೋದೆವು. ಎಲ್ಲರೂ ತಮ್ಮ ತಮ್ಮ ಕಷ್ಟಗಳನ್ನು ನಿವೇದಿಸಿ ಮನವಿ ಪತ್ರಗಳನ್ನು ಮುಖ್ಯಮಂತ್ರಿಯವರಿಗೆ ನೀಡಿದರು. ನಾವೂ ನಮ್ಮ ಮನವಿ ಪತ್ರವನ್ನು ಸಲ್ಲಿಸಿ ಅವರ ಸಹಾಯ ಹಸ್ತಕ್ಕೆ ಕೋರಿದೆವು. ನಗುಮುಖ, ಆಕರ್ಷಕ ವ್ಯಕ್ತಿತ್ವದ ರಾಮಕೃಷ್ಣ ಹೆಗಡೆ ಅವರು ಆಗಲಿ ನೋಡೋಣ ಎಂಬ ಭರವಸೆಯೊಂದಿಗೆ ಎಲ್ಲರನ್ನೂ ಭೇಟಿಯಾದರು.



ನಾನು ರಾಮಕೃಷ್ಣ ಹೆಗಡೆ ಅವರನ್ನು ಮುಖತಃ ಭೇಟಿಯಾಗಿದ್ದು ಅದೇ ಮೊದಲ ಬಾರಿ. ನಾನಿನ್ನು 30ರ ಹರೆಯದ ತರುಣ. ಆಗ ಬಹುಶಃ ಯಾವುದೋ ಕ್ರಿಕೆಟ್ ಮ್ಯಾಚ್ ಆಗುತ್ತಿತ್ತು. ಹೆಗಡೆ ಅವರು ಸ್ಕೋರ್ ಬಗ್ಗೆ ಕೇಳಿದರು. ನನಗೆ ತಿಳಿದಿರಲಿಲ್ಲ. ಯಾರೋ ಉತ್ತರ ಕೊಟ್ಟರು. ಇವೆಲ್ಲದರ ನಡುವೆ ನಾನು ಅವರನ್ನು 'ಸರ್ ನಿಮ್ಮ ಜೊತೆ ಒಂದು ಫೋಟೋ ತೆಗೆಯಲು ಆಸೆ' ಎಂದೆ. ಅವರು ಎಲ್ಲ ಘಟಾನುಘಟಿ ಉದ್ಯೋಗಪತಿಗಳ ನಡುವೆ ಇದ್ದರೂ 'ಆಗಲಿ ಬನ್ನಿ' ಎಂದರು. ಹತ್ತಿರದಲ್ಲಿಯೇ ಇದ್ದ ಹಲವು ಫೋಟೋ ಜರ್ನಲಿಸ್ಟ್‌ಗಳಲ್ಲಿ ಒಬ್ಬರಿಗೆ 'ಒಂದು ಫೋಟೋ ತೆಗೆಯುತ್ತಿರಾ' ಎಂದು ಕೇಳಿಕೊಂಡೆ. ಅವರು ಒಪ್ಪಿದಲ್ಲದೆ ಪ್ರಿಂಟ್ ಮಾಡಿ ನನಗೆ ಫೋಟೋವನ್ನು ಪೋಸ್ಟ್ ಮುಖಾಂತರ ಕಳಿಸಿಕೊಟ್ಟರು. ಈಗ ರಾಮಕೃಷ್ಣ ಹೆಗಡೆ ಮತ್ತು ಅವರ ಭೇಟಿಯನ್ನು ನೆನೆಸಿಕೊಂಡರೆ ರೋಮಾಂಚನವಾಗುತ್ತದೆ. ಈ ಸವಿನೆನಪು ಹೃದಯಾಂತರಾಳದಲ್ಲಿ ಬೆಚ್ಚನೆಯ ಭಾವ ಮೂಡಿಸುತ್ತಿದೆ. ಅಂದ ಹಾಗೆ ವಿಷಾದವೆಂದರೆ ಕರ್ನಾಟಕದಲ್ಲಿರುವ ಬಹುತೇಕ ಎಲ್ಲ ಟೆಕ್ಸ್‌ಟೇಲ್ ಮಿಲ್‌ಗಳು ಈಗ ಮುಚ್ಚಿ ಹೋಗಿವೆ. ಆ ಜಾಗದಲ್ಲಿ ಮಾಲ್‌ಗಳು ಇಲ್ಲವೆ ವಸತಿ ಸಮುಚ್ಚಯಗಳು ತಲೆ ಎತ್ತಿವೆ. ■

**ನೀವೂ ಬರೆಯಿರಿ**

*ಸವಿ ಸವಿ ನೆನಪು..*

*ಬದುಕಿನಲ್ಲಿ ಸಾವಿರ ಸವಿನೆನಪುಗಳಿವೆ. ಅಂತಹ ನೆನಪುಗಳಲ್ಲಿ ಒಂದನ್ನು ಹೆಕ್ಕಿ ತೆಗೆದು ಅಕ್ಷರ ರೂಪಕ್ಕಿಳಿಸಿ. ಈ ಅಂಕಣಕ್ಕೆ ಕಳಿಸುವ ಚಿತ್ರ ಉತ್ತಮ ಗುಣಮಟ್ಟದ್ದಾಗಿರಬೇಕು. ಚಿತ್ರಗಳಿಲ್ಲದ ಬರಹವನ್ನು ಸ್ವೀಕರಿಸಲಾಗುವುದಿಲ್ಲ. ಬರಹ ಸುಮಾರು 400 ಶಬ್ದಗಳಿರಲಿ. ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಿರಿ.*